ಬೆಲೆ ರೂ.2.50
Date of posting - 15th of every month at BPC Udupi.

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2024

॥ ಧಿಯೋ ಯೋನಃ ಪ್ರಚೋದಯಾತ್ ॥

ಶ್ರೀ ಶಾರದಾ ಪತ್ರಿಕೆಗೆ ರಜತ ಸಂಭ್ರಮ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-25 ಸಂಚಿಕೆ-5 ಪುಟಗಳು-8 Registered Under No.UDP/1260/2024-2026

## ಶ್ರೀ ಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ





ತಾ.03.05.2024ರಂದು ಶ್ರೀ ಶಾರದಾ ದೇವರ ಸನ್ನಿಧಿಯಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇದರ ವತಿಯಿಂದ ಸಾಮೂಹಿಕ ಉಪನಯನವು ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಸಂಘದ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್, ಕೋಶಾಧಿಕಾರಿ ಗಣೇಶ್ ಹೆಬ್ಬಾರ್, ಜತೆ ಕಾರ್ಯದರ್ಶಿ ವಿನೋದ್ ಕುಮಾರ್ ಇತರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಪುರೋಹಿತರಾದ ನಾಗರಾಜ್ ಭಟ್, ಶ್ರೀಪಾದ ಭಟ್‌ರಿಂದ ವೈದಿಕ ಕಾರ್ಯಕ್ರಮ ನಡೆಯಿತು. ಹಿರಿಯಡಕ ಆಳುಗ್ಗೆಲ್‌ನ ಚಿ. ಧನಂಜಯ, ಕಬ್ಬಿನಾಲೆಯ ಚಿ. ಚಂದನ್, ಚಿ. ಚೇತನ್ ಎಂಬ 3 ವಟುಗಳಿಗೆ ಬ್ರಹ್ಮೋಪದೇಶವು ಅವರ ಮನೆಯವರು ಮತ್ತು ಸಂಬಂಧಿಕರ ಉಪಸ್ಥಿತಿಯಲ್ಲಿ ಜರಗಿತು. ಮಧ್ಯಾಹ್ನ ಭೋಜನದಲ್ಲಿ ಸುಮಾರು 150ಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು.

ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು (ರಿ)
ಹಾಗೂ
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಉಡುಪಿ
ಇವರ ಆಶ್ರಯದಲ್ಲಿ
ಸಮಾಜದ ವಟುಗಳಿಗೆ ಹಾಗೂ ಸಮಾಜ ಬಾಂಧವರಿಗಾಗಿ
ವೈದಿಕ ಶಿಬಿರ - ಸಂಧ್ಯಾವಂದನೆ - ಸಂಕ್ಷಿಪ್ತ ಪೂಜಾ ಪದ್ಧತಿ
ದಿನಾಂಕ 12-05-2024 ರಿಂದ 21-05-2024ರವರೆಗೆ
ಸಮಯ : ಸಂಜೆ 4.30 ರಿಂದ 6.00ರವರೆಗೆ
ಸ್ಥಳ : ಜ್ಞಾನಮಂದಿರ, ಶಾರದಾ ಮಂಟಪ, ಉಡುಪಿ
ಆಸಕ್ತರು ಸಂಪರ್ಕಿಸಿ :
ವಿನೋದ್ ಕುಮಾರ್ (ಜೊತೆ ಕಾರ್ಯದರ್ಶಿ)
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಉಡುಪಿ
ಮೊಬೈಲ್ : 8310966892

## ಶೃಂಗೇರಿ ಜಗದ್ಗುರುಗಳಿಂದ ಶಿವಕೃಪಾ ಸಭಾಭವನ ಉದ್ಘಾಟನೆ



ಪರಮಪೂಜ್ಯ ಜಗದ್ಗುರು ಶಂಕರಾಚಾರ್ಯರ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿದುಶೇಖರ ಭಾರತೀ ಸನ್ನಿಧಾನಂಗಳವರು ತಾ.24.04.2024 ರಂದು ಪುತ್ತೂರು ಕಲ್ಲಾರೆಯ ಶಿವಬ್ರಾಹ್ಮಣ (ಸ್ಥಾನಿಕ) ಸಮಾಜದವರು ನಿರ್ಮಿಸಿದ ಶಿವಕೃಪಾ ಸಭಾಭವನವನ್ನು ಉದ್ಘಾಟಿಸಿದರು.

## ಶ್ರೀ ಶಾರದಾ ಮಂಟಪದಲ್ಲಿ ನವೀಕೃತ ಹವಾನಿಯಂತ್ರಿತ ಪದ್ಮನಾಭಯ್ಯ ಹಾಲ್





ಶ್ರೀ ಶಾರದಾ ಮಂಟಪದ ಭೋಜನಶಾಲೆಯ ಪಕ್ಕದಲ್ಲಿರುವ ಪದ್ಮನಾಭಯ್ಯ ಸಭಾಂಗಣವನ್ನು ಇದೀಗ ನವೀಕರಿಸಲಾಗಿದ್ದು ನೆಲಕ್ಕೆ ಟೈಲ್ಸ್, ಸೀಲಿಂಗ್‌ಗೆ ಆಕರ್ಷಕವಾಗಿ ವಿದ್ಯುತ್ ದೀಪಾಲಂಕಾರ ಹಾಗೂ ಎ.ಸಿ. ಅಳವಡಿಸಲಾಗಿದ್ದು ಗ್ರಾಹಕರ ಸೇವೆಗೆ ಲಭ್ಯವಿದೆ. ಇದು ಹವಾನಿಯಂತ್ರಿತ ಮಿನಿ ಸಭಾಂಗಣವಾಗಿದ್ದು ಸಭೆ-ಸಮಾರಂಭ, ಊಟ, ಉಪಹಾರ, ಬಫೆಗಳನ್ನೊಳಗೊಂಡ ಸುಮಾರು 100 ಮಂದಿಗೆ ಸರಿಹೊಂದುವ ನವೀಕೃತ ಹವಾನಿಯಂತ್ರಿತ ಹಾಲ್ ಆಗಿದೆ. ಈ ಸಭಾಂಗಣದ ನವೀಕರಣ ಕಾರ್ಯವನ್ನು ಕೇವಲ 2 ತಿಂಗಳಲ್ಲಿ ಪೂರ್ಣಗೊಳಿಸಿದ್ದು ಇದರ ಸಂಪೂರ್ಣ ವೆಚ್ಚವನ್ನು ಡಾ। ಶರತ್ ರಾವ್ ತಮ್ಮ ಮಾತಾಪಿತರ ಸ್ಮರಣಾರ್ಥ ನೀಡಿರುತ್ತಾರೆ.

### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | |
|---|---|
| 117. ಶಿ ಬಿ. ಕೆ. ಧನಂಜಯ ರಾವ್, ಬೆಳ್ತಂಗಡಿ | 1,00,000/– |
| 118. ಶ್ರೀ ರಾಜಶೇಖರ ರಾವ್ ಎಂ., ಹೆಜಮಾಡಿ | 50,000/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ,** ಧರ್ಮಾಧಿಕಾರಿ, ಉಡುಪಿ (9449591513)


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ನೂತನ ವಧೂವರರಿಗೆ ಅಭಿನಂದನೆಗಳು




### ಚಿ| ಆದಿತ್ಯ ಶರ್ಮ ಹಾಗೂ ಚಿ| ಸೌ| ವಿಭಾ

ಶ್ರೀಮತಿ ಗಾಯತ್ರಿ ಹಾಗೂ ಶ್ರೀ ಪ್ರಕಾಶ್ ಶರ್ಮ ಇವರ ಪುತ್ರ ಚಿ| ಆದಿತ್ಯ ಶರ್ಮ ಇವರ ವಿವಾಹವು ಶ್ರೀಮತಿ ಶುಭಾ ಮತ್ತು ಶ್ರೀ ವಿಜಯಚಂದ್ರ ರಾವ್ ಇವರ ಪುತ್ರಿ ಚಿ| ಸೌ| ವಿಭಾರೊಂದಿಗೆ ತಾ.28.04.2024ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು

**ನೂತನ ವಧೂವರರಿಗೆ ಶುಭ ಕೋರುವ**

ಶ್ರೀಮತಿ ಶುಭಾ ಮತ್ತು ಶ್ರೀ ವಿಜಯಚಂದ್ರ ರಾವ್, ಉದ್ಯಾವರ
ಶ್ರೀಮತಿ ಅಹಲ್ಯಾ ಮತ್ತು ಶ್ರೀ ಯಶವಂತ ಶರ್ಮ ಮತ್ತು ಮಕ್ಕಳು, ಮೊಮ್ಮಕ್ಕಳು
ಶ್ರೀಮತಿ ಶೋಭಾ ಚಂದ್ರಶೇಖರ್ ರಾವ್
ಶ್ರೀ ಮೋಹನದೇವ, ಸಹೋದರರು ಮತ್ತು ಸಹೋದರಿಯರು, ಅದ್ಯಪಾಡಿ
ಶ್ರೀಮತಿ ಪೂರ್ಣಿಮಾ ಪ್ರಫುಲ್ಲಚಂದ್ರ ರಾವ್, ಸಹೋದರಿಯರು, ಉದ್ಯಾವರ
ಶ್ರೀಮತಿ ಆರತಿರಾಣಿ ಮತ್ತು ಶ್ರೀ ಕೆ. ರಮಾನಾಥ ರಾವ್ ಮತ್ತು ಮಕ್ಕಳು
ಶ್ರೀ ವಲ್ಲಭ ರಾವ್
ಶ್ರೀಮತಿ ವಾಣಿಶ್ರೀ ಮತ್ತು ಶ್ರೀ ರವೀಂದ್ರ ರಾವ್ ಮತ್ತು ಮಕ್ಕಳು
ಶ್ರೀಮತಿ ಮನೋರಮಾ ಭವಾನಿಶಂಕರ ರಾವ್, ಕಾಪು
ಶ್ರೀ ಅರ್ಜುನ್ ಶರ್ಮ
ಶ್ರೀಮತಿ ರಮ್ಯ ಮತ್ತು ಶ್ರೀ ಶಿವಪ್ರಸಾದ ರಾವ್ ಸಹೋದರಿಯರು

## ಬ್ರಹ್ಮೋಪದೇಶ



### ಚಿ| ಶೌರ್ಯ

ತಾ.26.04.2024ರಂದು ಉಡುಪಿ ಕುಂಜಿಬೆಟ್ಟು "ಶ್ರೀ ಶಾರದಾ ಕಲ್ಯಾಣ ಮಂಟಪ"ದಲ್ಲಿ ಶ್ರೀಮತಿ ಪ್ರೀತಿ ಹಾಗೂ ದೀಪಕ್ ಕುಮಾರ್ ಇವರ ಪುತ್ರ ಚಿ| ಶೌರ್ಯ ಇವನ ಬ್ರಹ್ಮೋಪದೇಶಕ್ಕೆ ಆಗಮಿಸಿ, ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳು.


–: ಶುಭ ಕೋರುವ:–

ನಿಟ್ಟೆ ಕೆಮ್ಮಣ್ಣು ಶ್ರೀಮತಿ ಪದ್ಮಿನಿ ಮತ್ತು ಶ್ರೀ ಕೆ. ಅನಿಲ್ ಕುಮಾರ್
ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ವೈ. ಮುರಲೀಧರ್ ರಾವ್, ಕುಂಜಿಬೆಟ್ಟು, ಉಡುಪಿ
ಶ್ರೀಮತಿ ಗಾಯತ್ರಿ ಮತ್ತು ಶ್ರೀ ಕೆ. ಗಣೇಶ್ ಎಂ. ರಾವ್, ಕುಂಜಿಬೆಟ್ಟು, ಉಡುಪಿ
ಶ್ರೀಮತಿ ಜ್ಯೋತಿ ಮತ್ತು ಶ್ರೀ ಹರ್ಷವರ್ಧನ್ ಶ್ಯಾನುಭಾಗ್
ಶ್ರೀಮತಿ ವಸುಧಾ ಮತ್ತು ಶ್ರೀ ಅಜಿತ್ ಕುಮಾರ್ ಹಾಗೂ ಸಹೋದರರು
ಶ್ರೀಮತಿ ಅಖಿಲಾ ಮತ್ತು ಶ್ರೀ ದಿಲೀಪ್ ಕುಮಾರ್
ಶ್ರೀಮತಿ ದಿವ್ಯಾ ಮತ್ತು ಶ್ರೀ ಸಚ್ಚಿತಾನಂದ ಬಿ.ರಾವ್

## ಅಷ್ಟೈಶ್ವರ್ಯ ಅಕ್ಷಯವಾಗಲಿ !

– ವೈ.ಮೋಹನ ರಾವ್





ಶ್ರೀ ಆದಿಶಂಕರಾಚಾರ್ಯರು ಶ್ರೀ ಕನಕಧಾರಾ ಸ್ತೋತ್ರವನ್ನು ಅಕ್ಷಯ ತೃತೀಯಾ ದಿನದಲ್ಲಿ ಪಠಿಸಿದರು. ಒಂದು ಸ್ತೋತ್ರ ಹೀಗಿದೆ –

***ದದ್ಯಾದ್ ದಯಾನುಪವನೋ ದ್ರವಿಣಾಂಬುಧಾರಾಮ್, ಅಸ್ಮಿನ್ನಕಿಂಚನ–ವಿಹಂಗಶಿಶೌ ವಿಷಣ್ಣೇ ।***

***ದುಷ್ಕರ್ಮ–ಘರ್ಮಮಪನೀಯ ಚಿರಾಯ ದೂರಾತ್, ನಾರಾಯಣ–ಪ್ರಣಯಿನೀ–ನಯನಾಂಬುವಾಹಃ ॥***

ಅಂದರೆ, ಅಮ್ಮ ! ನಾರಾಯಣನಲ್ಲಿ ಪ್ರೀತಿಯಿರುವವಳೇ, ನೀನೀಗ ದಯೆಯೆಂಬ ವಾಯುವಿನಿಂದ ಪ್ರೇರಿತಳಾಗಿ, ನಿನ್ನ ಕೃಪಾದೃಷ್ಟಿಯೆಂಬ ಮೇಘದಿಂದ, ಐಶ್ವರ್ಯವೆಂಬ ಮಳೆಯನ್ನು ಸುರಿಸಿ, ಬಡತನದಿಂದ ದೀನ ಹಕ್ಕಿಯ ಮರಿಯಾದ ನನ್ನ ಪ್ರಾರಬ್ಧವೆಂಬ ಬೇಗೆಯನ್ನು ಶಾಶ್ವತವಾಗಿ ದೂರ ಮಾಡು. ಆಗ ದೇವಿ ಪ್ರಸನ್ನಳಾಗಿ ಚಿನ್ನದ ನೆಲ್ಲಿಕಾಯಿಯ ಮಳೆಗರೆಯುತ್ತಾಳೆ. ಬಡ ಬ್ರಾಹ್ಮಣಿ ಆಶ್ಚರ್ಯದಿಂದ ಚಿನ್ನದ ನೆಲ್ಲಿಕಾಯಿ ಹೆಕ್ಕುತ್ತಾ, ತನ್ನ ಬಡತನವನ್ನು ಹೋಗಲಾಡಿಸಿದಿ ಎಂದು ಶಂಕರನನ್ನು ಕೊಂಡಾಡುತ್ತಾಳೆ.

(3ನೇ ಪುಟಕ್ಕೆ...)

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016–17ರಿಂದ 2021–22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

## ಅಷ್ಟೈಶ್ವರ್ಯ ಅಕ್ಷಯವಾಗಲಿ !

■...2ನೇ ಪುಟದಿಂದ

ಇದೇ ದಿನ ಅನ್ನಪೂರ್ಣೆ ಜನಿಸಿದ ದಿನ. ಶ್ರೀ ಶಂಕರಾಚಾರ್ಯರು ಅನ್ನಪೂರ್ಣ ಸ್ತೋತ್ರವನ್ನು ರಚಿಸಿದರು. ಈ ಪ್ರಸಿದ್ಧ ಸ್ತೋತ್ರದ ಹನ್ನೆರಡು ಸ್ತೋತ್ರಗಳಲ್ಲಿ ಒಂದು ಹೀಗಿದೆ–

*ನಾನಾರತ್ನ–ವಿಚಿತ್ರ–ಭೂಷಣಕರೀ ಹೇಮಾಂಬರಾಡಂಬರೀ, ಮುಕ್ತಾಹಾರ ವಿಲಂಬಮಾನವಿಲಸದ್ವಕ್ಷೋಜ–ಕುಂಭಾಂತರೀ ।*

*ಕಾಶ್ಮೀರಾಗರುವಾಸಿತಾ ರುಚಿಕರೀ ಕಾಶೀಪುರಾಧೀಶ್ವರೀ, ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥*

ಅಂದರೆ, ನಾನಾ ರತ್ನಗಳಿಂದ ಕೂಡಿದ ಆಕರ್ಷಕ ಆಭರಣಗಳನ್ನು ಧರಿಸಿದವಳೇ, ಸುವರ್ಣದ ವಸ್ತ್ರವನ್ನುಟ್ಟು ಸಂತುಷ್ಟಳಾಗಿ ಇರುವವಳೇ, ವಕ್ಷಸ್ಥಳದಲ್ಲಿ ಲೋಲಾಡುತ್ತಿರುವ ಉಜ್ವಲವಾದ ಮುತ್ತಿನ ಹಾರವನ್ನು ಧರಿಸಿದವಳೇ, ಸುವಾಸಿತ ಚಂದನವನ್ನು ಲೇಪಿಸಿಕೊಂಡು ಸುಂದರವಾಗಿರುವವಳೇ, ಕಾಶೀ ಪಟ್ಟಣದ ದೇವತೆಯೇ, ಕೃಪೆಯಿಂದ ಸಹಾಯ ಹಸ್ತವನ್ನು ನೀಡುವವಳೇ, ಜಗತ್ತನ್ನು ಅನ್ನದಿಂದ ತೃಪ್ತಿಗೊಳಿಸುವ ಮಾತೆಯೇ ! ಆಹಾರ ಸಮೃದ್ಧಿಯನ್ನು ನೀಡು.

ದುರ್ಗೆಯು ಮಹಿಷಾಸುರನನ್ನು ವಧಿಸಿದ್ದೂ ಇದೇ ದಿನದಲ್ಲಿ. ಶ್ರೀ ಮಹಿಷಾಸುರ ಮರ್ದಿನೀ ಸ್ತೋತ್ರದ ಮೊದಲ ಪದ್ಯ ಇದು.

*ಅಯಿಗಿರಿನಂದಿನಿ ನಂದಿತಮೇದಿನಿ, ವಿಶ್ವವಿನೋದಿನಿ ನಂದಿನುತೇ ।*

*ಗಿರಿವರವಿಂಧ್ಯ–ಶಿರೋಧಿನಿವಾಸಿನಿ, ವಿಷ್ಣುವಿಲಾಸಿನಿ ಜಿಷ್ಣುನುತೇ ।*

*ಭಗವತಿ ಹೇ ಶಿಥಿಕಂಠಕುಟುಂಬಿನಿ ಭೂರಿಕುಟುಂಬಿನಿ ಭೂರಿಕೃತೇ ।*

*ಜಯ ಜಯ ಹೇ ಮಹಿಷಾಸುರಮರ್ದಿನಿ, ರಮ್ಯಕಪರ್ದಿನಿ ಶೈಲಸುತೇ ॥*

ಅಂದರೆ, ಹೇ ಮಾತೆ, ಪರ್ವತರಾಜನ ಮಗಳೇ, ಭೂಮಿಯನ್ನು ಆನಂದಗೊಳಿಸುವವಳೇ, ವಿಶ್ವದಿಂದ ಸಂತುಷ್ಟಳಾಗುವವಳೇ, ನಂದಿಯಿಂದ ಸ್ತುತಿಸಲ್ಪಟ್ಟವಳೇ, ಶ್ರೇಷ್ಠಪರ್ವತ ವಿಂಧ್ಯದ ಶಿಖರದಲ್ಲಿ ವಾಸಿಸುವವಳೇ, ವಿಷ್ಣು ತನ್ನ ಲೀಲಾ ಕಾರ್ಯವನ್ನು ನಡೆಸುವಂತೆ ಮಾಡುವವಳೇ, ಇಂದ್ರನಿಂದ ಕೀರ್ತಿಸಲ್ಪಟ್ಟವಳೇ, ಹೇ ನೀಲಕಂಠನ ಪತ್ನಿಯೇ, ಲಕ್ಷ್ಮೀಶಾರದಾದಿರೂಪದಿಂದ ಅನೇಕ ಗೃಹಿಣಿಯರ ರೂಪದಲ್ಲಿರುವವಳೇ, ಬೃಹತ್ತಾದ ಭೂಮಿಯನ್ನು ಸೃಷ್ಟಿಸಿದವಳೇ, ರಮಣೀಯ ಕೇಶರಾಶಿಯಿರುವವಳೇ, ಪರ್ವತರಾಜನ ಪುತ್ರಿಯೇ, ಹೇ ಮಹಿಷಾಸುರನನ್ನು ಸಂಹರಿಸಿದವಳೇ, ನಿನಗೆ ವಿಜಯವಾಗಲಿ, ನಿನಗೆ ಯಶಸ್ಸಾಗಲಿ.

ಕೃಷ್ಣನು ದ್ರೌಪದಿಗೆ ಅಕ್ಷಯಾಂಬರವನ್ನು ಕರುಣಿಸಿದ್ದು ಅಕ್ಷಯ ತದಿಗೆಯಂದೇ. ಪಾಂಡವರು ಶಸ್ತ್ರಾಸ್ತ್ರಗಳನ್ನು ಅಕ್ಷಯ ತದಿಗೆಯಂದೇ ಹೊರತೆಗೆದರೆಂದು ಪ್ರತೀತಿಯಿದೆ. ವರ್ಷದ ಶುಭ ದಿನವಾದ ಅಕ್ಷಯ ತೃತೀಯಾ ಅಕ್ಷಯ ಸೌಭಾಗ್ಯ ದಿನವೆಂದೂ ಹೇಳುವರು. ಅಂದು ಮನೆ ತುಂಬಿಸುವ ನಗನಾಣ್ಯ, ಚಿನ್ನ, ಸಂಪತ್ತು ವರ್ಷದಿಂದ ವರ್ಷಕ್ಕೆ ಅಕ್ಷಯವಾಗಲಿ ಎಂಬ ನಂಬಿಕೆಯಿದೆ. ಅಕ್ಷಯವಾಗಲಿ ಎಂಬ ಚಿಂತನೆಯಿಂದ ಧನ–ಧ್ಯಾನ–ಅಷ್ಟೈಶ್ವರ್ಯ ಲಕ್ಷ್ಮಿಯನ್ನು ಹೊಂದುವ ಮಾನವ ಸಹಜ ಅಭಿಲಾಷೆಯಾಗಿದೆ. ಈ ವರ್ಷ ಮೇ 10 ರಂದು ಅಕ್ಷಯ ತೃತೀಯಾ ದಿನವಾಗಿದೆ.

## ಕುಟ್ರುಪ್ಪಾಡಿ ತಲೇಕಿ ಶ್ರೀ ಶ್ರೀನಿವಾಸ ದೇವಾಲಯಕ್ಕೆ ಶೃಂಗೇರಿ ಶ್ರೀಗಳ ಭೇಟಿ



ಕುಟ್ರುಪ್ಪಾಡಿ ಗ್ರಾಮದ ತಲೇಕಿ ಶ್ರೀ ಶ್ರೀನಿವಾಸ ದೇವಾಲಯಕ್ಕೆ ಶ್ರೀ ಶೃಂಗೇರಿ ಶಾರದಾ ಪೀಠದ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಭೇಟಿ ನೀಡಿದರು. ಶ್ರೀಗಳನ್ನು ಪೂರ್ಣಕುಂಭ ಸ್ವಾಗತದ ಮೂಲಕ ಬರಮಾಡಿಕೊಳ್ಳಲಾಯಿತು. ದೇವಸ್ಥಾನದ ಪ್ರಮುಖರು ಹಾಗೂ ವಿವಿಧ ಸಂಘ ಸಂಸ್ಥೆಗಳ ಪರವಾಗಿ ಶ್ರೀಗಳಿಗೆ ಫಲಪುಷ್ಪ ಸಮರ್ಪಿಸಿ ಗೌರವಿಸಲಾಯಿತು.

ದೇವಾಲಯದ ವತಿಯಿಂದ ನೂತನವಾಗಿ ನಿರ್ಮಿಸಲಾದ ಗೋಪುರ ಪ್ರವೇಶ ದ್ವಾರವನ್ನು ಶ್ರೀಗಳು ಲೋಕಾರ್ಪಣೆಗೊಳಿಸಿದರು. ಬಳಿಕ ಶ್ರೀ ಶ್ರೀನಿವಾಸ ಮತ್ತು ಶ್ರೀ ವಿಶ್ವನಾಥ ದೇವರ ದರ್ಶನ ಪಡೆದು ದೇವಸ್ಥಾನದ ಇತಿಹಾಸ, ಉತ್ಸವಗಳು ಮತ್ತು ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದ ಶ್ರೀಗಳು ಭಕ್ತಾದಿಗಳನ್ನು ಅನುಗ್ರಹಿಸಿದರು.

ವೇದಮೂರ್ತಿ ವಾಗೀಶ ಶಾಸ್ತ್ರಿ, ದೇವಸ್ಥಾನದ ವಾರ್ಷಿಕೋತ್ಸವ ಹಾಗೂ ಪ್ರವೇಶ ದ್ವಾರಗಳ ನಿರ್ಮಾಣದ ದಾನಿಗಳಾದ ಉದ್ಯಮಿ ಹರ್ಷಕುಮಾರ್ ಕೇದಿಗೆ, ಸುಬ್ರಹ್ಮಣ್ಯ ಸಹಕಾರಿ ಸಂಘದ ನಿರ್ದೇಶಕಿ ಕನಕವಲ್ಲಿ ಎಚ್., ಧರ್ಮಾಧಿಕಾರಿ ಸತ್ಯಶಂಕರ ಬೊಳ್ಳಾವ, ತಲೇಕಿ ಶ್ರೀ ಶ್ರೀನಿವಾಸ ದೇವಾಲಯದ ಮೊಕ್ತೇಸರ ಕೆ. ಪ್ರಕಾಶ್ ರಾವ್, ಬಯಂಬು ಭಾಸ್ಕರ ರಾವ್, ವೇದವಲ್ಲಿ, ವೀಣಾ ಜೋಶಿ, ಸುರೇಶ್ ರಾವ್ ತಲೇಕಿ, ಕೃಷ್ಣರಾಜ್ ತಲೇಕಿ, ರಘುವೀರ್ ಪೆರ್ಡೂರು, ಅರ್ಚಕ ಭರತೇಶ್ವರ ಕೋಡಿಬೈಲು ಮತ್ತಿತರರು ಉಪಸ್ಥಿತರಿದ್ದರು.

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು (ರಿ)

## ವೈದಿಕ ಶಿಬಿರ

ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು (ರಿ). ಇದರ ಪ್ರಾಯೋಜಕತ್ವದಲ್ಲಿ, ನಮ್ಮ ಸಮಾಜದ ಎಲ್ಲಾ 19 ಸಂಘದಲ್ಲಿ ಮೇ 12 ರಿಂದ ಮೇ 21ರವರೆಗೆ ವೈದಿಕ ಶಿಬಿರಗಳನ್ನು ಆಯಾಯ ಸಂಘದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಶಿಬಿರದಲ್ಲಿ ನಿತ್ಯ ಸಂಕ್ಷಿಪ್ತ ಜಪ ಮತ್ತು ನಿತ್ಯ ಸಂಕ್ಷಿಪ್ತ ಪಂಚಾಯತನ ಪೂಜಾ ಪದ್ಧತಿಗಳ ಕುರಿತು ಮಾಹಿತಿ ಹಾಗೂ ತರಬೇತಿಯನ್ನು ನೀಡಲಾಗುವುದು.

ಎಲ್ಲಾ ಸಂಘದವರು ಈ ಕೆಳಗಿನ ನಿಯಮ ಪಾಲಿಸುವುದು :

1) ಶಿಬಿರದ ಸ್ಥಳ ನಿಗದಿಪಡಿಸುವುದು 2) ನಿಮ್ಮ ಸಂಘದಿಂದ ಒಬ್ಬ ಪ್ರಮುಖರನ್ನು ನೇಮಿಸುವುದು 3) ಶಿಬಿರಾರ್ಥಿಗಳನ್ನು ಸಂಪರ್ಕಿಸಿ ಒಟ್ಟು ಸಂಖ್ಯೆ ಖಾತ್ರಿ ಪಡಿಸಿಕೊಳ್ಳುವುದು. 4) ನಿಮ್ಮ ಪರಿಸರದ ಒಬ್ಬರು ಪುರೋಹಿತರನ್ನು ನೇಮಿಸಿಕೊಳ್ಳುವುದು. 5) ನಿತ್ಯ ಲಘುಉಪಾಹಾರ ವ್ಯವಸ್ಥೆಯನ್ನು ಮಾಡುವುದು 6) ಸಮಯ ಸಂಜೆ 4 ರಿಂದ 6ರ ಅವಧಿಯಲ್ಲಿ ಮಾಡುವುದು 7) ಎಲ್ಲಾ ಸಂಘಗಳಿಗೆ ಒಂದೇ ತರಹದ ಬ್ಯಾನರ್ ಅಳವಡಿಸುವುದು. (ಅದರ ಪ್ರತಿ ಕಳುಹಿಸಲಾಗುವುದು.)

ಈ ಮೇಲಿನ ಎಲ್ಲಾ ವ್ಯವಸ್ಥೆ ಮಾಡಿಕೊಂಡು ಮಹಾಮಂಡಲಕ್ಕೆ ವರದಿ ನೀಡುವುದು. ಶಿಬಿರದ ಪುರೋಹಿತರ ಖರ್ಚು ಮಹಾಮಂಡಲದಿಂದ ಭರಿಸಲಾಗುವುದು. ಜಪ ಪುಸ್ತಕ ಮತ್ತು ಪೂಜಾ ಪದ್ಧತಿ ಪುಸ್ತಕವನ್ನು ನಿಮ್ಮ ಬೇಡಿಕೆಯಂತೆ ಪೂರೈಸಲಾಗುವುದು.

– ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹಾಗೂ ಕೋಶಾಧಿಕಾರಿ
ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ. ಮಂಗಳೂರು (ರಿ).

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864
**ಉದಯಾದ್ರಿ ಕೆಟರರ್ಸ್**
ಉಮಾಮಹೇಶ್ವರ ಉದಯಾದ್ರಿ ಮಠ, ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ, "ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.
ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ ಪಡಿಸಿಕೊಳ್ಳಬಹುದು.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣ ರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ, ಪಿ.ವಿ. ರಮೇಶ್ ಪಾಂಡೇಶ್ವರ್, ಉಮೇಶ್ ರಾವ್ ಎರ್ಮಾಳು

## ಲೇಖಕಿ ರಾಜೇಶ್ವರಿ ಕುಮಾರ್ ರಾವ್‌ರವರ "ಹೊಸ ಬೆಳಕು"



"ಹೊಸ ಬೆಳಕು" ನಮ್ಮ ಸ್ಥಾನಿಕ ಸಮಾಜದ ಹೆಮ್ಮೆಯ ಲೇಖಕಿ ರಾಜೇಶ್ವರಿ ಕುಮಾರ್ ರಾವ್ ಅವರ ಚೊಚ್ಚಲ ಪ್ರಕಟಣೆ. ಈ ಕಥಾಸಂಕಲನದಲ್ಲಿ ಒಟ್ಟು ಹದಿನೇಳು ಕಥೆಗಳಿವೆ. ಸುಮಾರು ನಲವತ್ತು ವರ್ಷಗಳಿಂದ ಅವರ ಕಥೆಗಳು ವಿವಿಧ ಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಎಂ.ಎ., ಬಿ.ಎಡ್. ಮಾಡಿದ ಅವರು ಸುಮಾರು ಮೂವತ್ತು ವರ್ಷಗಳ ಕಾಲ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಉದ್ಯೋಗ ಮಾಡಿದ್ದರು. ರಾಜೇಶ್ವರಿ ಅವರು ಬೆಂಗಳೂರಿನ ಅ.ಭಾ.ಸ್ಥಾ.ಬ್ರಾ.ಸಭಾದ ಎಂ. ಎಸ್. ರಾಧಾಕೃಷ್ಣ ರಾವ್ ಅವರ ಕಿರಿಯ ಸಹೋದರಿಯಾಗಿದ್ದು ಪ್ರಸ್ತುತ ತಮ್ಮ ಪುತ್ರ ಹಾಗೂ ಕುಟುಂಬದೊಡನೆ ಬೆಂಗಳೂರಿನ ಹೆಚ್.ಎಸ್.ಆರ್. ಬಡಾವಣೆಯಲ್ಲಿ ವಾಸವಿದ್ದಾರೆ. ಪುಸ್ತಕದ ಬಗ್ಗೆ ಆಸಕ್ತರು ರಾಜೇಶ್ವರಿ ಅವರನ್ನು 8123904769 ಮೊಬೈಲ್ ಮೂಲಕ ಸಂಪರ್ಕಿಸಬಹುದು.

## ಗುರುರಾಜ ಮಾರ್ಪಳ್ಳಿಯವರಿಗೆ ಯಕ್ಷವಿದ್ವಾಂಸ ಪ್ರಶಸ್ತಿ



ಉಡುಪಿಯ ಯಕ್ಷಗಾನ ಕಲಾರಂಗ ತಲ್ಲೂರು ಕನಕಾ ಅಣ್ಣಯ್ಯ ಶೆಟ್ಟಿ ಸ್ಮರಣೆಯಲ್ಲಿ ನೀಡುವ ಯಕ್ಷಗಾನ ಕಲಾರಂಗ ಪ್ರಶಸ್ತಿಗೆ ಹಿರಿಯ ಯಕ್ಷಗಾನ ಕಲಾವಿದ, ವಿದ್ವಾಂಸ ಗುರುರಾಜ ಮಾರ್ಪಳ್ಳಿ ಆಯ್ಕೆಯಾಗಿದ್ದಾರೆ. ಮಾರ್ಪಳ್ಳಿಯವರು ಯಕ್ಷಗಾನವಲ್ಲದೆ ನಾಟಕ, ಸಿನಿಮಾ, ಸಂಗೀತಾ, ಶಿಲ್ಪ, ಸಾಹಿತ್ಯ ಹೀಗೆ ಕಲೆಯ ಬಹು ಆಯಾಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಹುಮುಖೀ ಕಲಾಸಾಧಕರಾಗಿದ್ದಾರೆ. ಪ್ರಶಸ್ತಿಯು ಪ್ರಶಸ್ತಿ ಪರಿಕರ ಸಹಿತ ರೂ. 40000/– ನಗದು ಪುರಸ್ಕಾರ ಒಳಗೊಂಡಿದೆ. ಪ್ರಶಸ್ತಿ ಪ್ರಧಾನ ಸಮಾರಂಭ ಮೇ 19 ಭಾನುವಾರ ಸಂಜೆ 5.00 ಗಂಟೆಗೆ ಯಕ್ಷಗಾನ ಕಲಾರಂಗದ ನೂತನ ಕಟ್ಟಡದ ಐವೈಸಿ ಸಭಾಂಗಣದಲ್ಲಿ ಪ್ರಶಸ್ತಿ ಸ್ಥಾಪಕ ತಲ್ಲೂರು ಫ್ಯಾಮಿಲಿ ಟ್ರಸ್ಟ್ ನ ಅಧ್ಯಕ್ಷ ಡಾ। ತಲ್ಲೂರು ಶಿವರಾಮ ಶೆಟ್ಟಿ ಇವರ ಉಪಸ್ಥಿತಿಯಲ್ಲಿ ಅತಿಥಿ ಗಣ್ಯರ ಸಮಕ್ಷ ಜರಗಲಿದೆಯೆಂದು ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಳಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.


**ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.)**
ಮೂಡುಬಿದಿರೆ ದ.ಕ

ಆತ್ಮೀಯರೇ, ದಿನಾಂಕ : 19-05-2024 ರ ಆದಿತ್ಯವಾರ ಅಪರಾಹ್ನ ಗಂಟೆ 3.30ರಿಂದ
ಮೂಡುಬಿದಿರೆ ಅಲಂಗಾರು ಕಡಲಕೆರೆ ಅನುಗ್ರಹ ಮನೆಯಲ್ಲಿ ಪರಿಷತ್ತಿನ ವತಿಯಿಂದ



**ಶಂಕರ ಜಯಂತಿ**
ಜರಗಲಿದೆ

ಅಪರಾಹ್ನ 3.30ರಿಂದ ಶ್ರೀ ಆದಿಶಂಕರ ಭಜನಾ ಮಂಡಳಿಯಿಂದ
ಭಜನಾ ಕಾರ್ಯಕ್ರಮ
ಸಂಜೆ 4.30ರಿಂದ ಶಂಕರ ಅಷ್ಟೋತ್ತರ, ರುದ್ರಾಭಿಷೇಕ, ಮಹಾಪೂಜೆ
ಸಂಜೆ 5.00ರಿಂದ ವೈದಿಕ ಶಿಬಿರ ಉದ್ಘಾಟನೆ
ಉದ್ಘಾಟಕರು : ವೇ। ಮೂ। ಶ್ರೀ ಕೃಷ್ಣರಾಜ ಭಟ್ ಹೆಜಮಾಡಿ
ಸಂಜೆ 5.30ರಿಂದ ಪ್ರಸಿದ್ಧ ಕಲಾವಿದರಿಂದ ತಾಳಮದ್ದಳೆ
**ಶಂಕರ ವಿಜಯ**


ವಿ.ಸೂ : ಕಳೆದ ವರ್ಷ ಪ್ರಾರಂಭಿಸಿದ ಮನೆ ಒಂದರಿಂದ ದಿನ ಒಂದರ ...

ಫಲಹಾರದ ವ್ಯವಸ್ಥೆ ಇದೆ.

ತನು ಮನ ಧನ ಸಹಕಾರ ಬಯಸುವ

ಅಧ್ಯಕ್ಷರು ಎಂ. ದೇವಾನಂದ ಭಟ್
ಖಜಾಂಚಿ ಬಿ.ಕೆ. ವಸಂತ್‌ರಾಜ್
ಗೌರವಾಧ್ಯಕ್ಷರು ಪಿ. ಚಂದ್ರಶೇಖರ ರಾವ್
ಪದಾಧಿಕಾರಿಗಳು ಹಾಗೂ ಸರ್ವಸದಸ್ಯರು
ಪ್ರಧಾನ ಕಾರ್ಯದರ್ಶಿ ಪಿ. ಸುರೇಶ್ ರಾವ್
ಮಹಿಳಾಧ್ಯಕ್ಷರು ಜ್ಯೋತಿ ಜೆ. ರಾವ್


## ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು, ಪಡುಬಿದ್ರಿ.



ಭಕ್ತಾಭಿಮಾನಿಗಳೇ,
ಇದೇ ಬರುವ ತಾ.22.05.2024 ನೇ ಬುಧವಾರದಂದು ಶ್ರೀ ದೇವಳದಲ್ಲಿ

**'ನರಸಿಂಹ ಜಯಂತಿ ವಾರ್ಷಿಕೋತ್ಸವ'**

ಶ್ರೀ ಕ್ಷೇತ್ರದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಜರುಗಲಿದೆ. ಅಂದು ದೇವರಿಗೆ **ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ** ನಡೆಯಲಿದೆ ಹಾಗೂ

**ಶ್ರೀ ವಿಷ್ಣುಮೂರ್ತಿ ಮತ್ತು ಉಪದೇವರುಗಳ ಗರ್ಭಗುಡಿಯ ದ್ವಾರ ಮತ್ತು ಬಾಗಿಲುಗಳು, ಗರ್ಭಗುಡಿಯ ಹೊರಮೈ ಹಾಗೂ ತೀರ್ಥ ಮಂಟಪ ಮತ್ತು ದೇವಸ್ಥಾನದ ಮುಖ್ಯ ದ್ವಾರಕ್ಕೆ ಸುಮಾರು ರೂ.14 ಲಕ್ಷದ ಹಿತ್ತಾಳೆ ಕವಚವನ್ನು ಸಮರ್ಪಿಸಲಾಗುವುದು.**

**ಸಂಜೆ ರಂಗಪೂಜೆ, ಪ್ರಸಾದ ವಿತರಣೆ** ನೆರವೇರಲಿರುವುದು.

ಈ ಕಾರ್ಯಕ್ರಮಗಳಲ್ಲಿ ಭಕ್ತರಾದ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಭಗವತ್ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ
ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು





**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS






ಕೆ. ದಿನಮಣಿ ಶಾಸ್ತ್ರೀ
ಮೊಬೈಲ್ : 8277190632
9482284970
**ಚಿತ್ತಾರ ಫೋಟೋ ಆರ್ಟ್**
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ–576213.



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ
ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
**SHREE KRISHNA ELECCTRONICS & ELECTRICALS**
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



ಶೃಂಗೇರಿಯ ಕಿರಿಯ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀ ತೀರ್ಥ ಸ್ವಾಮಿಗಳು ಕಡಬದ ನಾಲೂರು ಶ್ರೀ ಶಂಕರ ನಾರಾಯಣ ದೇವಸ್ಥಾನಕ್ಕೆ ಭೇಟಿ ನೀಡಿದ ಅಪೂರ್ವ ಕ್ಷಣಗಳು.




ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳವರು ತಾ.25.04.2024 ರಂದು ದ್ವಿತೀಯ ಬಾರಿಗೆ ಪುತ್ತೂರಿನ "ಶಿವಸದನ" ಕ್ಕೆ ಪಾದಾರ್ಪಣೆ ಮಾಡಿ ನಮ್ಮೆಲ್ಲರನ್ನು ಅನುಗ್ರಹಿಸಿದರು.

## ಡಾ। ಮೇಘ ಟಿ. ಇವರಿಗೆ ಪದೋನ್ನತಿ



ಕೆ.ಎಂ.ಸಿ. ಆಸ್ಪತ್ರೆ ಮಂಗಳೂರು ಇಲ್ಲಿ ಅನಸ್ತೇಷಿಯಾ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಡಾ। ಮೇಘ ರವರು ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ಪದೋನ್ನತಿಗೊಂಡಿರುತ್ತಾರೆ. ಇವರು ಸದನದ ಸಕ್ರಿಯ ಸದಸ್ಯರಾದ ಟಿ.ಬಿ. ಮೋಹನ್ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ದಂಪತಿಗಳ ಸುಪುತ್ರಿ. ಇವರ ಪತಿ ಡಾ। ಕೀರ್ತನ್ ರವರು ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಮೂಳೆ ತಜ್ಞರಾಗಿ ಕೆಲಸ ಮಾಡುತ್ತಿದ್ದಾರೆ.

## ಡಾ। ಇನ್ನ ಅಶ್ವಿನ್ ರಾವ್‌ರಿಂದ ಮಾಹಿತಿ ಶಿಬಿರ



ಡಾ। ಇನ್ನ ಅಶ್ವಿನ್ ರಾವ್ (ಡಾ। ಇನ್ನ ಪ್ರಭಾಕರ್ ರಾವ್ ಮತ್ತು ಶ್ರೀಮತಿ ಗೀತಾ ದಂಪತಿಯ ಪುತ್ರ) ಭಾರತೀಯ ನೌಕಾ ದಂತ ಕೇಂದ್ರ (INDC) ದಂತೇಶ್ವರಿ, ಕೊಲಾಬಾ ಮುಂಬೈ ಆಯೋಜಿಸಿದ್ದ CDE ಕಾರ್ಯಕ್ರಮದಲ್ಲಿ ಭಾರತೀಯ ನೌಕಾಪಡೆ ಮತ್ತು ಸೇನೆಯ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುವ ಗೌರವವನ್ನು ಪಡೆದರು. ಡಾ। ಅಶ್ವಿನ್ ಅವರ ಅಧಿವೇಶನವು **"ದಂತ ಅಭ್ಯಾಸದಲ್ಲಿ ನಿದ್ರಾಜನಕ ಅಗತ್ಯ, ನಿದ್ರಾಜನಕ ಮಾರ್ಗಗಳು ಮತ್ತು ವಿವಿಧ ಔಷಧಗಳ ಬಳಕೆ"** ಈ ವಿಷಯದ ಮೇಲೆ ನಡೆಯಿತು. ಸೆಷನ್‌ಗಳ ನಂತರ ಇನ್ಹಲೇಷನ್ ನಿದ್ರಾಜನಕದಲ್ಲಿ ತರಬೇತಿ ನೀಡಲಾಯಿತು.

## ನಿಧನ



ತಂತ್ರಾಡಿ ಬರದಕಲ್ ನಿವಾಸಿ ಸುಬ್ರಹ್ಮಣ್ಯ ರಾವ್ ಅವರ ಪತ್ನಿ ಸುಕನ್ಯರವರು 63ನೇ ವಯಸ್ಸಿನಲ್ಲಿ ತಾ.21.03.2024ರಂದು ಸ್ವಗೃಹದಲ್ಲಿ ನಿಧನರಾದರು. ಅವರು ಪತಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ಪುತ್ತೂರಿನ ಮುರದವರಾದ ಶಿವರಾಮ ರಾವ್ ಅವರು 90ನೇ ವಯಸ್ಸಿನಲ್ಲಿ ತಾ.09.04.2024 ರಂದು ಸ್ವಗೃಹದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅವರು ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರು ಇದರ ಕಾರ್ಯಕಾರಿ ಸಮಿತಿಯ ಸದಸ್ಯ ಶಶಿಕಾಂತ ರಾವ್ ರವರ ತಂದೆ.

★★★★ ★★★★



ಶ್ರೀಮತಿ ಅಬ್ಲಿಕಟ್ಟೆ ರತ್ನಾವತಿ ಹೆಬ್ಬಾರ್ ಅವರು 93ನೇ ವಯಸ್ಸಿನಲ್ಲಿ ತಾ.10.04.2024 ರಂದು ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಹೋಟೆಲ್ ಉದ್ಯಮಿ ಕಾಳಾವರ ಸೀತಾರಾಮಯ್ಯ ಅವರು 93ನೇ ವಯಸ್ಸಿನಲ್ಲಿ ತಾ.14.04.2024ರಂದು ನಿಧನರಾದರು. ಎರಡು ತಿಂಗಳ ಹಿಂದೆಯಷ್ಟೇ ಇವರ ಪತ್ನಿ ಸ್ವರ್ಗಸ್ಥರಾಗಿದ್ದರು. ಕಾಳಾವರ ದೇವಳದ ಮಾಜಿ ಮೊಕ್ತೇಸರರಾಗಿದ್ದ ಪ್ರೊ. ಶಂಕರ ರಾವ್ ಕಾಳಾವರ ಇವರ ಕಿರಿಯ ಸಹೋದರ. ಸೀತಾರಾಮಯ್ಯನವರು ಈರ್ವರು ಪುತ್ರರು, ಈರ್ವರು ಪುತ್ರಿಯರು, ಕುಟುಂಬ ವರ್ಗದವರನ್ನು ಅಗಲಿದ್ದಾರೆ.

★★★★ ★★★★



ಪ್ರೊ. ನಾವೂರು ಕಳಮೆ ಕೃಷ್ಣರಾಜ್ ಅವರು 89ನೇ ವಯಸ್ಸಿನಲ್ಲಿ ತಾ.20.04.2024 ರಂದು ಮುಂಬೈನಲ್ಲಿ ನಿಧನರಾದರು. ಅವರು ಪತ್ನಿ, ಮತ್ತು ಓರ್ವ ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★




ಕಂಬಾರು ರಾಮಕೃಷ್ಣಯ್ಯ ಅವರು 76ನೇ ವಯಸ್ಸಿನಲ್ಲಿ ತಾ.20.04.2024ರಂದು ಸ್ವಗೃಹ ಬೆರಿಪದವಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಮೂರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಅಲೆವೂರು ನಟರಾಜ್ ಅವರ ಪತ್ನಿ ಶ್ರೀಮತಿ ಶೋಭಾ ಅವರು 56ನೇ ವಯಸ್ಸಿನಲ್ಲಿ ತಾ.24.04.2024 ರಂದು ಅಲೆವೂರು ಉಡುಪಿಯಲ್ಲಿ ನಿಧನರಾದರು. ಅವರು ಪತಿ, ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಶ್ರೀಮತಿ ವಿಜಯಲಕ್ಷ್ಮಿ (ಪಾದೆಬೆಟ್ಟು ದೇವರಾಯ ಶರ್ಮಾ ಅವರ ಪತ್ನಿ) ಅವರು 70ನೇ ವಯಸ್ಸಿನಲ್ಲಿ ತಾ.28.04.2024 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★

ಬೆಳ್ಳೆ ರಮೇಶ್ ರಾವ್ ಮತ್ತು ಶ್ರೀಮತಿ ಬೆಳ್ಳೆ ತಾರಾ ದಂಪತಿಯ ಪುತ್ರ ಬೆಳ್ಳೆ ಪ್ರದೀಪ್ ಅವರು 48ನೇ ವಯಸ್ಸಿನಲ್ಲಿ ತಾ.12.04.2024 ರಂದು ಚೆನ್ನೈನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬಳು ಪುತ್ರಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★

ಸಕ್ಕಟ್ಟು ಸದಾಶಿವ ರಾವ್ ಅವರ ಪತ್ನಿ ಶೋಭ ಎಸ್. ರಾವ್ ತಾ.10.04.2024ರಂದು ನಿಧನರಾದರು.

★★★★ ★★★★

ದಿ। ನಾರಾಯಣಯ್ಯ ಅವರ ಪುತ್ರ ಉಬರಳೆ ರಮೇಶ್ ರಾವ್ ಅವರು 54ನೇ ವಯಸ್ಸಿನಲ್ಲಿ ತಾ.18.04.2024 ರಂದು ಮಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

*With Best Complimemts From*
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.






## ಶುಭ ವಿವಾಹ

ಶ್ರೀಮತಿ ಗಾಯತ್ರಿ ಶರ್ಮಾ ಮತ್ತು ಶಿವಪ್ರಕಾಶ್ ಶರ್ಮಾ ದಂಪತಿಯ ಪುತ್ರ (ಎ.ಪಿ.ವೈ ಶರ್ಮಾ ಮತ್ತು ಅಹಲ್ಯಾ ಶರ್ಮಾ ಬೆಂಗಳೂರು ದಂಪತಿಯ ಮೊಮ್ಮಗ) **ಚಿ। ಆದಿತ್ಯ** ಅವರ ವಿವಾಹವು ಶ್ರೀಮತಿ ಶುಭ ಮತ್ತು ವಿಜಯಚಂದ್ರ ರಾವ್ ಉದ್ಯಾವರ ದಂಪತಿಯ ಪುತ್ರಿ **ಚಿ। ಸೌ। ವಿಭಾ**ರವರೊಂದಿಗೆ ತಾ.28.04.2024ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

**** ****

ದಿನಾಂಕ 21–4–2024 ರಂದು ದಿ। ರಾಮಮೋಹನ ರಾವ್ ಕರಂದಾಡಿ ಮತ್ತು ಶ್ರೀಮತಿ ಸುಲೋಚನಾ ರಾವ್ ದಂಪತಿಯ ಪುತ್ರ **ಚಿ। ಅನಂತ ಮೂರ್ತಿ** ಅವರ ವಿವಾಹವು ಜಗದೀಶ್ ರಾವ್ ಕಾಟಿಪಳ್ಳ ಮತ್ತು ಶ್ರೀಮತಿ ಶುಭ ದಂಪತಿಯ ಪುತ್ರಿ **ಚಿ। ಸೌ। ನವ್ಯಾ**ರವರೊಂದಿಗೆ ಉಚ್ಚಿಲ ಮೊಗವೀರ ಭವನದ ಮಾಧವ ಮಂಗಳ ಸಭಾಭವನದಲ್ಲಿ ಜರಗಿತು.

**** ****

ಮುದಸರಿಗೆ ಜಗದೀಶ್ ರಾವ್ ಮತ್ತು ಶ್ರೀಮತಿ ವೃಂದಾ ಅಲಂಗಾರು, ಮೂಡಬಿದ್ರೆ ದಂಪತಿಯ ಪುತ್ರ **ಚಿ। ಕೃತಿವಾಸ** ಅವರ ವಿವಾಹವು ಕಮಲಶಿಲೆ ಸುಬ್ರಾಯ ಹೆಗಡೆ ಮತ್ತು ಶ್ರೀಮತಿ ಪ್ರೇಮಾ ದಂಪತಿಯ ಪುತ್ರಿ **ಚಿ। ಸೌ। ರಶ್ಮಿ**ಯವರೊಂದಿಗೆ ತಾ.01.05.2024 ರಂದು ಶ್ರೀ ಆನೆಗುಡ್ಡೆ ಶ್ರೀ ವಿನಾಯಕ ಸಭಾಗೃಹದಲ್ಲಿ ಜರಗಿತು.

**** ****

ಶ್ರೀಮತಿ ಲಲಿತಾಕುಮಾರಿ ಮತ್ತು ದಿ। ವಿಶ್ವೇಶ್ವರ್ ರಾವ್ ದಂಪತಿಯ ಪುತ್ರಿ **ಚಿ। ಸೌ। ಕೃತಿಕಾ** ಅವರ ವಿವಾಹವು ಶ್ರೀಮತಿ ವಿದ್ಯಾವತಿ ಮತ್ತು ವಿಜಯೇಂದ್ರ ರಾವ್ ದಂಪತಿಯ ಪುತ್ರ **ಚಿ। ಶ್ರೀವತ್ಸ ಎ.ಎಸ್.** ರವರೊಂದಿಗೆ ತಾ.01.05.2024 ರಂದು ಕೊಪ್ಪದ ಶ್ರೀ ಗಾಯತ್ರಿ ಸಾಂಸ್ಕೃತಿಕ ಸಭಾಭವನದಲ್ಲಿ ಜರಗಿತು.

**** ****

ಶ್ರೀಮತಿ ಪದ್ಮಮಾಲಿನಿ ಮತ್ತು ತೋಟಲ್ ಗೋಪಾಲಕೃಷ್ಣ ರಾವ್ ದಂಪತಿಯ ಪುತ್ರ **ಚಿ। ನವನೀತ್** ಅವರ ವಿವಾಹವು ಶ್ರೀಮತಿ ಪದ್ಮಾ ಮತ್ತು ಕೃಷ್ಣರಾವ್ ಅರೆಹೊಳೆ ದಂಪತಿಯ ಪುತ್ರಿ **ಚಿ। ಸೌ। ನಮಿತಾ** ರವರೊಂದಿಗೆ ತಾ.03.05.2024 ರಂದು ಬೆಂಗಳೂರಿನ ಕೋಡಿಗೆಹಳ್ಳಿ ಶ್ರೀ ಜ್ಞಾನಶಕ್ತಿ ಮಂಟಪದಲ್ಲಿ ಜರಗಿತು.

**** ****

ಶ್ರೀಮತಿ ಸುನೀತಾ ಮತ್ತು ಹರೀಶ್ಚಂದ್ರ ರಾವ್ ಬೆಂಗಳೂರು ದಂಪತಿಯ ಪುತ್ರ **ಚಿ। ಹರಿಪ್ರಸಾದ್** ಅವರ ವಿವಾಹವು ಶ್ರೀಮತಿ ಮುಕಾಂಬಿಕಾ ಮತ್ತು ನಾರಾಯಣ ರಾವ್ ನೆಟ್ಟಣಿಗೆ ದಂಪತಿಯ ಪುತ್ರಿ **ಚಿ। ಸೌ। ಸ್ನೇಹಾ**ರವರೊಂದಿಗೆ ತಾ.02.05.2024ರಂದು ಉಡುಪಿ ಗುಂಡಿಬೈಲಿನಲ್ಲಿರುವ "ಬ್ರಾಹ್ಮೀ ಸಭಾಭವನ"ದಲ್ಲಿ ಜರಗಿತು.

**** ****

ಶ್ರೀಮತಿ ಮೀನಾಕ್ಷಿ ಮತ್ತು ಕೆ. ಸುಜೇಂದ್ರ ರಾವ್ ದಂಪತಿಯ ಪುತ್ರಿ ಚಿ। ಸೌ। ಸಹನಾ ಅವರ ವಿವಾಹವು ಶ್ರೀಮತಿ ಶಶಿಕಲಾ ಮತ್ತು ಮದನ್‌ಮೋಹನ್ ದಂಪತಿಯ ಪುತ್ರ ಚಿ। ಮನೋಜ್ ರವರೊಂದಿಗೆ ತಾ.18.04.2024ರಂದು ಬೆಂಗಳೂರಿನ ಜಯನಗರದ ಪೂರ್ಣಿಮಾ ಕನ್ವೆನ್ಷನ್ ಸೆಂಟರ್‌ನಲ್ಲಿ ಜರಗಿತು.

## ಗೃಹಪ್ರವೇಶ

ಶ್ರೀಮತಿ ಜಯಲಕ್ಷ್ಮಿ ಹೆಬ್ಬಾರ್ ರವರ ನೂತನ ಗೃಹ "ಶ್ರೀ ನಿಲಯ" ಗೃಹಪ್ರವೇಶವನ್ನು ಕಾಪೋಳಿ ಕಬ್ಬಿನಾಲೆಯಲ್ಲಿ ತಾ.01.05.2024ರಂದು ನೆರವೇರಿಸಿದರು.

**** ****

ಹರಿನಾರಾಯಣ ಭಂಡಿ ಮತ್ತು ಶ್ರೀಮತಿ ಕುಸುಮ ಭಂಡಿ ದಂಪತಿಗಳು ತಮ್ಮ ನೂತನ ಗೃಹ "ಓಂ ಪಂಚಶ್ರೀ"ಯ ಗೃಹಪ್ರವೇಶವನ್ನು ತಾ.03.05.2024ರಂದು ನಡೆಸಿದರು. ಅದೇ ದಿನ ಸಂಜೆ ನೂತನ ಗೃಹಪ್ರವೇಶದ ಅಂಗವಾಗಿ ಸತ್ಕಾರಕೂಟ ಹಾಗೂ ಪೆರ್ಡೂರು ಮೇಳದವರಿಂದ 6.30ರಿಂದ ಕಾಲಮಿತಿ ಯಕ್ಷಗಾನ "ಗಂಗೆ–ತುಂಗೆ–ಕಾವೇರಿ"ಯು ಜರಗಿತು.

**** ****

ಶ್ರೀಮತಿ ಭಾರ್ಗವಿ ಮತ್ತು ಕೆ. ಹರಿದಾಸ ರಾವ್ ಮೂಡಬೆಟ್ಟು, ಕಟಪಾಡಿ ಅವರು ಹೇರಂಜೆ ಕ್ರಾಸ್ ಚಾಂತಾರು, ಬ್ರಹ್ಮಾವರದಲ್ಲಿ ನೂತನವಾಗಿ ನಿರ್ಮಿಸಿದ "ಆಶ್ರಯ" ಮನೆಯ ಗೃಹಪ್ರವೇಶವನ್ನು ತಾ.14.04.2024ರಂದು ನೆರವೇರಿಸಿದರು.

**** ****

ಶ್ರೀಮತಿ ಹೇಮಾವತಿ ಮತ್ತು ಪರಮೇಶ್ವರ್ ಹೆಬ್ಬಾರ್ ಉಡುಪಿ ಕಿನ್ನಿಮುಲ್ಕಿಯ ವೇಗಾಸ್ ಟೌನ್ ಶಿಪ್‌ನಲ್ಲಿ ನೂತನವಾಗಿ ನಿರ್ಮಿಸಿದ ಪಾಂಚಜನ್ಯದ ಗೃಹಪ್ರವೇಶವನ್ನು ತಾ.12.04.2024ರಂದು ನೆರವೇರಿಸಿದರು.

## ಶುಭ ಜನನ

ರಂಜನಿ (D/o ಶ್ರೀಮತಿ ಶಕುಂತಲಾ ಮತ್ತು ಪರಮೇಶ್ವರ್ ಸೂರಿ) ಮತ್ತು ಶ್ರೇಯಸ್ (S/o ಶ್ರೀಮತಿ ವೀಣಾ ಮತ್ತು ರಾಮಮೋಹನ್ ಆರ್ ಬೆಳ್ಳೆ) ಅವರಿಗೆ ತಾ.27.04.2024ರಂದು ಮಂಗಳೂರಿನಲ್ಲಿ ಗಂಡು ಮಗುವಿನ ಜನನ.

**** ****

ಶ್ರೀಮತಿ ಸುಷ್ಮಾ ಮತ್ತು ಸಂದೇಶ್ ಬಿ. ಪುತ್ತೂರು ಅವರಿಗೆ ತಾ.26.04.2024 ರಂದು ಮಂಗಳೂರಿನಲ್ಲಿ ಗಂಡು ಮಗುವಿನ ಜನನ.

**** ****

ಮುರ ಪುತ್ತೂರಿನ ಶಶಿಕಾಂತ ಮತ್ತು ರಶ್ಮಿ ರಾವ್ (ಎಚ್.ಎಂ. ರಾವ್ ಮತ್ತು ಶ್ರೀಮತಿ ವಿಜಯ ಕುಮಾರಿ ಬಾಯಿ ದಂಪತಿಯ ಪುತ್ರಿ) ಅವರಿಗೆ ತಾ.13.04.2024ರಂದು ಬೆಂಗಳೂರಿನಲ್ಲಿ ಗಂಡು ಮಗುವಿನ ಜನನ.

**** ****

ಪಡುಬಿದ್ರೆ ಮಧ್ವನಗರದ ಸುಬ್ರಹ್ಮಣ್ಯ ಶ್ಯಾನುಭಾಗ್ ಮತ್ತು ಅಮೃತ (ಕಾಪು ಅಶೋಕ್ ಕುಮಾರ್ ಮತ್ತು ಶ್ರೀಮತಿ ರತ್ನ ದಂಪತಿಯ ಪುತ್ರಿ) ಅವರಿಗೆ ತಾ.23.04.2024ರಂದು ಹೆಣ್ಣು ಮಗುವಿನ ಜನನ.

**** ****

ಹಿರಿಯಡ್ಕ ರಾಜೇಶ್ವರಿಯವರ ಪುತ್ರ ಆದರ್ಶ ಮತ್ತು ಐಶ್ವರ್ಯ ಅವರಿಗೆ ತಾ.02.05.2024ರಂದು ಹೆಣ್ಣು ಮಗುವಿನ ಜನನ.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4–00ರಿಂದ

**ತಾ.26-05-2024 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.25-05-2024** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ **5-00**ರಿಂದ **6-00**ರ ವರೆಗೆ)

**ತಾ.28-05-2024** ಹಾಗೂ **11.06.2024** ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ **9-00**ರಿಂದ ಮಧ್ಯಾಹ್ನ **12-00** ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ವೃಷಭ ಮಾಸದ ವಿಶೇಷ ದಿನಗಳು

| | | | |
|---|---|---|---|
| **14.05.2024** | ವೃಷಭ ಸಂಕ್ರಮಣ | **03.06.2024** | ಭಾಗವತ–ವೈಷ್ಣವೈಕಾದಶೀ |
| **19.05.2024** | ಸರ್ವೈಕಾದಶೀ | **06.06.2024** | ಅಮಾವಾಸ್ಯೆ |
| **23.05.2024** | ಹುಣ್ಣಿಮೆ | **07.06.2024** | ಗ್ರೀಷ್ಮ ಋತು ಜೇಷ್ಠ ಮಾಸದ ಶುಕ್ಲ ಪಕ್ಷಾರಂಭ |
| **24.05.2024** | ವಸಂತ ಋತು, ವೈಶಾಖ ಮಾಸದ ಕೃಷ್ಣ ಪಕ್ಷಾರಂಭ | **14.06.2024** | ಮಿಥುನ ಸಂಕ್ರಮಣ |
| **26.05.2024** | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.42ಕ್ಕೆ | **18.06.2024** | ಸರ್ವೈಕಾದಶೀ–ನಿರ್ಜಲ |
| **02.06.2024** | ಸ್ಮಾರ್ತೈಕಾದಶೀ, ಗುರು ಉದಯ | **20.06.2024** | ದಕ್ಷಿಣಾಯ ಆರಂಭ |

## ಬ್ರಹ್ಮೋಪದೇಶ

ಶ್ರೀಮತಿ ಶೀತಲ್ ಮತ್ತು ಕಿರಣ್ ಎ.ಬಿ. (ದಿ। ಎ. ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ರಾಧಾ ಹಾಗೂ ದಿ। ಎ.ಪಿ. ನಾರಾಯಣ ಶರ್ಮಾ ಮತ್ತು ಶ್ರೀಮತಿ ಶೋಭಾ ಅವರ ಮೊಮ್ಮಗ) ದಂಪತಿಯ ಪುತ್ರ **ಚಿ। ವೇದಾಂತ್**ನ ಬ್ರಹ್ಮೋಪದೇಶವು ತಾ.21.04.2024ರಂದು ಬೆಂಗಳೂರಿನ ಕಾಡುಗೋಡಿಯ ಸುರಕ್ಷಾ ಫೇರ್‌ವೀವ್ ವಿಲ್ಲಾದ ಬಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ನಡೆಯಿತು.

**** ****

ಶ್ರೀಮತಿ ಸೌಮ್ಯ ಮತ್ತು ನಾರಾಯಣ ವಿ. ಲೋಕೇಶ್ವರ ದಂಪತಿಯ ಪುತ್ರ **ಚಿ। ಪವಿತ್ ಲೋಕೇಶ್ವರ** ಅವರ ಬ್ರಹ್ಮೋಪದೇಶವು ತಾ.21.04.2024ರಂದು ಕುಮುಟಾದ ಹವ್ಯಕ ಸಭಾಭವನದಲ್ಲಿ ಜರಗಿತು.

**** ****

ಶ್ರೀಮತಿ ಅನುಪಮಾ ಮತ್ತು ಮಂಜುನಾಥ್ ಹೆಬ್ಬಾರ್ ದಂಪತಿಯ ಪುತ್ರ **ಚಿ। ಧ್ರುವ್**ನ ಬ್ರಹ್ಮೋಪದೇಶವು ತಾ.26.04.2024ರಂದು ಕುಂದಾಪುರ ತಾಲೂಕು ರಟ್ಟಾಡಿಯ "ಸ್ವಗ್ರಹ" ದಲ್ಲಿ ಜರಗಿತು.

**** ****

ಶ್ರೀಮತಿ ಪದ್ಮಿನಿ ಮತ್ತು ಕೆ. ಅನಿಲ್ ಕುಮಾರ್ ಪೌತ್ರ ಹಾಗೂ ಶ್ರೀಮತಿ ಜಯಲಕ್ಷ್ಮಿ ಮತ್ತು ವೈ. ಮುರಳೀಧರ ರಾವ್ ಪೌತ್ರ, ಶ್ರೀಮತಿ ಪ್ರೀತಿ ಮತ್ತು ದೀಪಕ್ ಕುಮಾರ್ ದಂಪತಿಯ ಪುತ್ರ **ಚಿ। ಶೌರ್ಯ**ನ ಬ್ರಹ್ಮೋಪದೇಶವು ತಾ.26.04.2024ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

**** ****

ಶ್ರೀಮತಿ ಜಯಲಕ್ಷ್ಮಿ ಹೆಬ್ಬಾರ್ ಪೌತ್ರ, ಶ್ರೀಮತಿ ಅನುಷಾ ಮತ್ತು ವಿನಯ್ ಹೆಬ್ಬಾರ್ ದಂಪತಿಯ ಪುತ್ರ **ಚಿ। ಅನ್ವಯ್**ನ ಬ್ರಹ್ಮೋಪದೇಶವು ತಾ.26.04.2024ರಂದು ಓಂತಿಬೆಟ್ಟು "ಶ್ರೀ ಲಕ್ಷ್ಮೀಕೃಪಾ ಕಲ್ಯಾಣ ಮಂಟಪ"ದಲ್ಲಿ ಜರಗಿತು.

**** ****

ಶ್ರೀಮತಿ ಜಯಶ್ರೀ ಮತ್ತು ವೈ. ಭುವನೇಂದ್ರ ರಾವ್ ರವರ ಪೌತ್ರ ಹಾಗೂ ಶ್ರೀಮತಿ ಅರ್ಚನಾ ಮತ್ತು ಎಲ್ಲೂರು ಅಜಿತ್ ದಂಪತಿಯ ಪುತ್ರ **ಚಿ। ಅಂಕಿತ್**ನ ಬ್ರಹ್ಮೋಪದೇಶವು ತಾ.02.05.2024ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

**** ****

ಪ್ರತಾಪ ವಗ್ಗ ಮತ್ತು ಶ್ರೀಮತಿ ಸ್ವಾತಿ ದಂಪತಿಯ ದ್ವಿತೀಯ ಪುತ್ರ ಚಿ। **ನಚಿಕೇತ**ನ ಬ್ರಹ್ಮೋಪದೇಶವು ತಾ.12.04.2024ರಂದು ಪಡುಬಿದ್ರಿ ಬಾಲಗಣಪತಿ ದೇವಾಲಯದಲ್ಲಿ ಜರಗಿತು.

## ಭೀಮರಥಿ ಶಾಂತಿ

ಸುರೇಶ್ ಕುತ್ಪಾಡಿಯವರು ತಾ.01.05.2024ರಂದು ಉದ್ಯಾವರ ಶಂಭುಶೈಲೇಶ್ವರ ದೇವಸ್ಥಾನದಲ್ಲಿ ತಮ್ಮ ಭೀಮರಥಿ ಶಾಂತಿ(70ನೇ ವರ್ಷ)ಯನ್ನು ಪತ್ನಿ ನಾಗವಲ್ಲಿ, ಮಕ್ಕಳು ಮತ್ತು ಕುಟುಂಬಿಕರು ಹಾಗೂ ಬಂಧು ಮಿತ್ರರೊಂದಿಗೆ ಆಚರಿಸಿಕೊಂಡರು.

# ದ್ವಿತೀಯ ಪಿಯುಸಿ ಸಾಧಕರು



## ನೇತ್ರಾ

ವಿಜಯ ಕೆರಂಚಿಮೂಲೆ ಕನ್ಯಾನ ಮತ್ತು ಶ್ರೀಮತಿ ಅರುಣಾ ದಂಪತಿಯ ಪುತ್ರಿ ಕುಮಾರಿ ನೇತ್ರಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 592/600 ಅಂಕಗಳಿಸಿದ್ದಾರೆ.



## ಅಭಿನವ್ ಎಚ್.ಮಾರ್ಪಳ್ಳಿ

ಹರೀಶ್ ಕುಮಾರ್ ಮಾರ್ಪಳ್ಳಿ ಮತ್ತು ಶ್ರೀಮತಿ ಪ್ರತಿಮಾ ದಂಪತಿಯ ಪುತ್ರ ಅಭಿನವ್ ಎಚ್. ಮಾರ್ಪಳ್ಳಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ 587/600 ಅಂಕಗಳಿಸಿದ್ದಾರೆ.



## ಸಾರ್ಥಕ್ ಟಿ.

ಶರತ್ ರಾವ್ ಟಿ. ಮತ್ತು ಶ್ರೀಮತಿ ಸ್ಮಿತಾ ಶರತ್ ದಂಪತಿಯ ಪುತ್ರ ಸಾರ್ಥಕ್ ಟಿ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 594/600 (99%) ಅಂಕಗಳಿಸಿದ್ದಾರೆ.



## ಕೆ.ರವೀಶ್ ರಾವ್

ಕೆ. ರಮೇಶ್ ರಾವ್ ಮತ್ತು ಶ್ರೀಮತಿ ಆಶಾ ಕೆ. ಉಡುಪಿ ದಂಪತಿಯ ಪುತ್ರ ಕೆ. ರವೀಶ್ ರಾವ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 576/600 (96%) ಅಂಕಗಳಿಸಿದ್ದಾರೆ.



## ಎಂ.ಶಾಶ್ವತಿ ರಾವ್

ಎಂ. ರಾಧಾಕೃಷ್ಣ ರಾವ್ ಮತ್ತು ಶ್ರೀಮತಿ ಶ್ರೀಕಲಾ ವೈ. ಬೆಂಗಳೂರು ದಂಪತಿಯ ಪುತ್ರಿ ಎಂ. ಶಾಶ್ವತಿ ರಾವ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 591/600 (98.5%) ಅಂಕಗಳಿಸಿದ್ದಾರೆ.



## ಅರುಂಧತಿ

ಕಟಪಾಡಿ ಮೋಹನ್ ರಾವ್ ಮತ್ತು ಶ್ರೀಮತಿ ಸ್ವರ್ಣ ದಂಪತಿಯ ಪುತ್ರಿ ಕುಮಾರಿ ಅರುಂಧತಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 586/600 ಅಂಕಗಳಿಸಿದ್ದಾರೆ.



## ಮೃದುಲಾ

ಮುಕ್ಕಾದ ಸ್ಕಂದ ಮತ್ತು ಶ್ರೀಮತಿ ಕಿರಣ್ ದಂಪತಿಯ ಪುತ್ರಿ ಕುಮಾರಿ ಮೃದುಲಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 541/600 ಅಂಕಗಳಿಸಿದ್ದಾರೆ.



## ಲಾಸ್ಯ ನಟರಾಜ್

ಬಾಳೆಹೊನ್ನೂರು ನಟರಾಜ್ ಸ್ಟುಡಿಯೋ ಮಾಲಕ ನಟರಾಜ್ ಮತ್ತು ಶ್ರೀಮತಿ ತೇಜಸ್ವಿನಿಯವರ ಪುತ್ರಿ ಕುಮಾರಿ ಲಾಸ್ಯ ನಟರಾಜ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇಕಡ 97 ಅಂಕಗಳಿಸಿದ್ದಾರೆ.



## ಮನ್ವಿತ್ ಶರವೂರು

ಯಾದವೇಂದ್ರ ಶರವೂರು ಮತ್ತು ಶ್ರೀಮತಿ ಅನುರಾಧ ದಂಪತಿಯ ಪುತ್ರ ಮನ್ವಿತ್ ಶರವೂರು ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ ಪರೀಕ್ಷೆಯಲ್ಲಿ 552/600 ಅಂಕಗಳಿಸಿದ್ದಾರೆ.



## ಆದರ್ಶ್ ಎ.ರಾವ್

ಮೈಸೂರಿನ ಅಶೋಕ್ ರಾವ್ ಮತ್ತು ಆಶಾ ದಂಪತಿಗಳ ಪುತ್ರ ಆದರ್ಶ್ ಎ. ರಾವ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 95.8% ಅಂಕಗಳಿಸಿದ್ದಾರೆ. PCMCಯಲ್ಲಿ 98% ಪಡೆದಿರುವ ಇವನು ಉಡುಪಿ ಚಿಟ್ಪಾಡಿ ಎಂ. ಸದಾನಂದ ರಾವ್ ಅವರ ಮೊಮ್ಮಗ.



## ತನ್ಮಯಿ ಶ್ಯಾನುಭೋಗ್

ಕಿರಿಮಂಜೇಶ್ವರದ ಕೆ. ಉಮೇಶ್ ಶ್ಯಾನುಭೋಗ್ ಅವರ ಕಿರಿಯ ಸಹೋದರ ಕೆ. ಸುರೇಶ್ ಶ್ಯಾನುಭೋಗ್ ಅವರ ಪುತ್ರಿ ಕು. ತನ್ಮಯಿ ಶ್ಯಾನುಭೋಗ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 591 ಅಂಕ (98.50%) ಗಳಿಸಿದ್ದಾರೆ



## ಪ್ರಣವ್ ಭಂಡಿ

ಪ್ರದೀಪ್ ಭಂಡಿ ಮತ್ತು ಶ್ರೀಮತಿ ಶ್ರೀದೇವಿ ದಂಪತಿಯ ಪುತ್ರ ಪ್ರಣವ್ ಭಂಡಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 592/600 ಅಂಕಗಳಿಸಿದ್ದಾರೆ.



## ಪ್ರಜ್ಞಾ ಎನ್.ರಾವ್

ಎರ್ಮಾಳು ನರೇಂದ್ರ ರಾವ್ ಮತ್ತು ಶ್ರೀಮತಿ ಜ್ಯೋತಿ ದಂಪತಿಯ ಪುತ್ರಿ ಪ್ರಜ್ಞಾ ಎನ್. ರಾವ್ ಬೆಂಗಳೂರಿನ ಜೆ.ಎಸ್. ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 582/600 ಅಂಕಗಳಿಸಿದ್ದಾರೆ.



## ಅನುರಾಗ್ ವಿ. ರಾವ್

ವಸಂತ ಕುಮಾರ್ ಮತ್ತು ಶ್ರೀಮತಿ ಸುಮಿತ್ ವಿ. ರಾವ್ ದಂಪತಿಯ ಪುತ್ರ ಅನುರಾಗ್ ವಿ. ರಾವ್ ಬೆಂಗಳೂರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 574/600 ಅಂಕಗಳಿಸಿದ್ದಾರೆ.



## ವಿಶ್ವೇಶ್ ಯು.

ದಾಮೋದರ ಉಬರಳೆ ಮತ್ತು ವಿನುತ ದಂಪತಿಯ ಪುತ್ರ ವಿಶ್ವೇಶ್ ಯು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 538/600 ಅಂಕಗಳಿಸಿದ್ದಾರೆ.



## ಯು.ತನುಶ್ರೀ

ಜಯಪ್ರಕಾಶ ಉಳ್ತೂರು ಮತ್ತು ಶ್ರೀಮತಿ ಸುಮಾರಾಣಿ ದಂಪತಿಯ ಪುತ್ರಿ ಯು. ತನುಶ್ರೀ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 576/600 ಅಂಕಗಳಿಸಿದ್ದಾರೆ.



## ಬಿ.ಮನಸ್ವಿನಿ ರಾವ್

ಶಿವಪ್ರಸಾದ್ ರಾವ್ ಬೊಂಡಂತಿಲ ಮತ್ತು ಶ್ರೀಮತಿ ವಿದ್ಯಾಶಾರದಾ ದಂಪತಿಯ ಪುತ್ರಿ ಕುಮಾರಿ ಬಿ. ಮನಸ್ವಿನಿ ರಾವ್ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 591/600 (98.5%) ಪಡೆದಿದ್ದು ಮಂಗಳೂರಿನ ಶಾರದಾ ಪಿಯು ಕಾಲೇಜಿನಲ್ಲಿ 2ನೇ ಸ್ಥಾನ ಗಳಿಸಿರುತ್ತಾರೆ.



## ಶಾರ್ವರಿ

ದಿ। ಸುಬ್ರಹ್ಮಣ್ಯ ಪಿ. ಮೂಡಿಗೆರೆ ಮತ್ತು ಶ್ರೀಮತಿ ಪೂರ್ಣಿಮಾ ದಂಪತಿಯ ಪುತ್ರಿ ಶಾರ್ವರಿ ಎಂ. ಎಸ್. ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 528/600 ಅಂಕಗಳಿಸಿದ್ದಾರೆ.



## ಕಾರ್ತಿಕ್ ಕುಮಾರ್

ಪಿ. ರಾಮಕೃಷ್ಣ ರಾವ್ ಮತ್ತು ಶ್ರೀಮತಿ ವೀಣಾ ಪೆರ್ವಾಜೆ, ಸುಳ್ಯ ದಂಪತಿಗಳ ಪುತ್ರ ಕಾರ್ತಿಕ್ ಕುಮಾರ್ ಪಿ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 555/600 ಅಂಕಗಳಿಸಿದ್ದಾರೆ. ಇವರು ಪುತ್ತೂರಿನ ನೆಲ್ಲಿಕಟ್ಟೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿ.



## ನಿಹಾರಿಕಾ ಎ.

ಮಂಗಳೂರಿನ ಎ. ಸುರೇಶ ಹಾಗೂ ಶ್ರೀಮತಿ ನರ್ಮದಾ ದಂಪತಿಯ ಪುತ್ರಿ ಕು। ನಿಹಾರಿಕಾ ಎ. ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.96.67 (580/600) ಅಂಕಗಳಿಸಿದ್ದಾರೆ.



## ಅಕ್ಷರ್ ಸೃಜನ್

ಕಾರಿಂಜ ಅತಿಕಾರಬೈಲ್ ಅಶೋಕ್ ಕುಮಾರ್ ಮತ್ತು ಶ್ರೀಮತಿ ಶಾಂತಿ ದಂಪತಿಯ ಪುತ್ರ ಅಕ್ಷರ್ ಸೃಜನ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 540/600 ಅಂಕಗಳಿಸಿದ್ದಾರೆ.



## ತನ್ಮಯ್

ಡಾ। ಲಿಂಗ ಪ್ರಸಾದ್ ಮತ್ತು ಶ್ರೀಮತಿ ಸ್ಮಿತಾ ಬೈಂದೂರು ದಂಪತಿಯ ಪುತ್ರ ತನ್ಮಯ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 568/600 ಅಂಕಗಳಿಸಿದ್ದಾರೆ.



## ದೀಪ್ತಿ ಎನ್. ರಾವ್

ಉಚ್ಚಿಲ ನಟರಾಜ್ ಮತ್ತು ಶ್ರೀಮತಿ ಅರ್ಪಣಾ ರಾವ್ ದಂಪತಿಯ ಪುತ್ರಿ ಕುಮಾರಿ ದೀಪ್ತಿ ಎನ್. ರಾವ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 585/600 ಅಂಕಗಳಿಸಿದ್ದಾರೆ.



## ನೇಹಾ ಬೆಳ್ಳೆ

ರಾಜೇಶ್ ಬೆಳ್ಳೆ ಮತ್ತು ಡಾ। ಸಂಜಾತ ದಂಪತಿಯ ಪುತ್ರಿ ಕುಮಾರಿ ನೇಹಾ ಬೆಳ್ಳೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 561/600 ಅಂಕಗಳಿಸಿದ್ದಾರೆ.




## ಶ್ರೀಜಾ ಹೆಬ್ಬಾರ್

ರಾಘವೇಂದ್ರ ಹೆಬ್ಬಾರ್ ಮತ್ತು ಶ್ರೀಮತಿ ಶುಭಾ ದಂಪತಿಯ ಪುತ್ರಿ ಕುಮಾರಿ ಶ್ರೀಜಾ ಹೆಬ್ಬಾರ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 589/600 ಅಂಕಗಳನ್ನು ಗಳಿಸಿ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ 4ನೆಯ ಸ್ಥಾನ ಪಡೆದಿದ್ದಾರೆ.



## ನಿಧಿ ಪಿ. ಶರ್ಮಾ

ಬಪ್ಪನಾಡು ಪ್ರಶಾಂತ್ ಶರ್ಮಾ ಮತ್ತು ಶ್ರೀಮತಿ ಸಹನಾ ದಂಪತಿಯ ಪುತ್ರಿ ನಿಧಿ ಪಿ. ಶರ್ಮಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 591/600 ಅಂಕಗಳಿಸಿದ್ದಾರೆ. ಇವರು ಉಡುಪಿಯ ಜ್ಞಾನ ಸುಧಾ ಕಾಲೇಜಿನ ವಿದ್ಯಾರ್ಥಿನಿ.



## ಪ್ರತೀಕ್ ಪಿ.ರಾವ್

ಮಂಟ್ರಾಡಿ ಪ್ರಶಾಂತ್ ಕುಮಾರ್ ಕೆ. ಮತ್ತು ಶ್ರೀಮತಿ ಪ್ರತಿಭಾ ಆರ್. ಮೈಸೂರು ದಂಪತಿಯ ಪುತ್ರ ಪ್ರತೀಕ್ ಪಿ. ರಾವ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 573/600 ಅಂಕಗಳಿಸಿದ್ದಾರೆ.



## ರಿತಮ್

ಪ್ರಸನ್ನ ಉಪ್ಪುಂದ ಮತ್ತು ಶ್ರೀಮತಿ ಲೀಲಾರೋಹಿಣಿ ದಂಪತಿಯ ಪುತ್ರ ರಿತಮ್ ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ 90% ಅಂಕಗಳಿಸಿದ್ದಾರೆ.



## ಆರತಿ ಹೆಬ್ಬಾರ್

ಕಬ್ಬಿನಾಲೆ ಗುರುಪ್ರಸಾದ್ ಹೆಬ್ಬಾರ್ (ಪುರೋಹಿತರು) ಮತ್ತು ಶ್ರೀಮತಿ ಅನುರಾಧ ದಂಪತಿಯ ಪುತ್ರಿ ಕುಮಾರಿ ಆರತಿ ಹೆಬ್ಬಾರ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 563/600 ಅಂಕಗಳಿಸಿದ್ದಾರೆ.



## ಅಭಿರಾಮ

ಮುರಳೀಧರ ವಿಟ್ಲ ಮತ್ತು ಶ್ರೀಮತಿ ರಾಜೇಶ್ವರಿ ದಂಪತಿಯ ಪುತ್ರ ಅಭಿರಾಮ ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ ಪರೀಕ್ಷೆಯಲ್ಲಿ 543/600 ಅಂಕಗಳಿಸಿದ್ದಾರೆ.



## ಧನ್ಯಶ್ರೀ

ಪಡುಬಿದ್ರಿ ಪಾದೆಬೆಟ್ಟಿನ ರವಿಪ್ರಕಾಶ್ ರಾವ್ ಮತ್ತು ಮಮತಾ ದಂಪತಿಗಳ ದ್ವಿತೀಯ ಪುತ್ರಿ ಕು. ಧನ್ಯಶ್ರೀ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 573/600 ( 95.5%) ಅಂಕಗಳಿಸಿದ್ದಾರೆ.



## ಅಭಿಜ್ಞಾ

ಪಡುಪಣಂಬೂರಿನಲ್ಲಿ ವಾಸವಾಗಿರುವ ರಾಧಾಕೃಷ್ಣ ಕಬ್ಬಿನಾಲೆ ಮತ್ತು ಶ್ರೀಮತಿ ಶರಣ್ಯ ದಂಪತಿಯ ಪುತ್ರಿ ಕು. ಅಭಿಜ್ಞಾ ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ 541/600 ಅಂಕಗಳಿಸಿದ್ದಾರೆ.



## ಶ್ರೀಮ ಶ್ರೀನಿವಾಸ

ಶ್ರೀನಿವಾಸ್ ಮತ್ತು ಶ್ರೀಮತಿ ಮಂಜುಳಾ ಹೆಬ್ಬಾರ್ ದಂಪತಿಯ ಪುತ್ರಿ ಶ್ರೀಮ ಶ್ರೀನಿವಾಸ ಹೆಬ್ಬಾರ್ ಶಿವಪುರ, ಹೆಬ್ರಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 581/600 ಅಂಕಗಳಿಸಿದ್ದಾರೆ.

## ಎಸ್.ಎಸ್.ಎಲ್.ಸಿ ಸಾಧಕರು



### ಸೃಜನ್

ಸುರೇಶ್ ಬಿ ಮತ್ತು ಪ್ರಥ್ವಿ ಎಂ. ದಂಪತಿಯ ಪುತ್ರ ಸೃಜನ್ ಬಿ.ಎಸ್. (ಕನ್ಯಾಡಿ ಬಳ್ಳಮಂಜ ಸುಬ್ರಹ್ಮಣ್ಯ ಮತ್ತು ಭುವನೇಶ್ವರಿ ಹಾಗೂ ಉಡುಪಿ ಮಂಟ್ರಾಡಿ ಮೋಹನ್ ರಾವ್ ಮತ್ತು ಕೆ. ಸವಿತಾ ದಂಪತಿಯ ಪೌತ್ರ) ಬೆಂಗಳೂರಿನಲ್ಲಿ 10ನೇ ತರಗತಿಯ ICSE ಪರೀಕ್ಷೆಯಲ್ಲಿ 98.80% ಅಂಕಗಳಿಸಿದ್ದಾರೆ.



### ವೃಶಾಂಕ್ ಉಪಾಧ್ಯಾಯ

ಶ್ರೀಮತಿ ಸಂಧ್ಯಾ ಮತ್ತು ದಿ| ವಿದ್ಯಾಶಂಕರ್‌ರವರ ಪುತ್ರ (ದಿ| ಸದಾಶಿವ ಉಪಾಧ್ಯಾಯ ಮತ್ತು ದಿ| ವೇದಾವತಿ ಹಾಗೂ ಶ್ರೀಮತಿ ಪ್ರಸನ್ನ ಮತ್ತು ಪಿ. ಬಾಲಗಂಗಾಧರರವರ ಪೌತ್ರ) ಕಟೀಲು ವೃಶಾಂಕ್ ಉಪಾಧ್ಯಾಯ ಬೆಂಗಳೂರಿನಲ್ಲಿ 10ನೇ ತರಗತಿಯ ICSE ಪರೀಕ್ಷೆಯಲ್ಲಿ 94.8% ಅಂಕಗಳಿಸಿದ್ದಾರೆ.



### ಅದ್ವಿಕಾ ರಾವ್

ಸುಕೇಶ್ ಜೆ. ರಾವ್ ಮತ್ತು ಪವಿತ್ರಾ ಎಸ್. ರಾವ್ ದಂಪತಿಯ ಪುತ್ರಿ ಕುಮಾರಿ ಅದ್ವಿಕಾ ಸುಕೇಶ್ ರಾವ್ (ವೈ. ಜನಾರ್ದನ್ ರಾವ್ ಮತ್ತು ಭಾರತಿ ರಾವ್ ದಂಪತಿಯ ಪೌತ್ರಿ) 10ನೇ ತರಗತಿಯ ICSE ಬೋರ್ಡ್ ಪರೀಕ್ಷೆಯಲ್ಲಿ 92.17% ಅಂಕಗಳಿಸಿದ್ದಾರೆ.



### ಅನಿಷಾ

ಅವಿನಾಶ್ ಎ ಮತ್ತು ಶ್ರೀಮತಿ ಅಪರ್ಣಾ ರಾವ್ ಬೆಂಗಳೂರು ದಂಪತಿಯ ಪುತ್ರಿ ಅನಿಷಾ 10ನೇ ತರಗತಿಯ ICSE ಬೋರ್ಡ್ ಪರೀಕ್ಷೆಯಲ್ಲಿ 90.6% ಅಂಕಗಳನ್ನು ಗಳಿಸಿದ್ದಾರೆ.

## ಬ್ರಹ್ಮೋಪದೇಶ




### ಚಿ| ಅಂಕಿತ್ ರಾವ್ ಎಲ್ಲೂರು

ತಾ.02.05.2024ರಂದು
ಉಡುಪಿ ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ"ದಲ್ಲಿ
ಶ್ರೀಮತಿ ಅರ್ಚನ ಹಾಗೂ ಶ್ರೀ ಎಲ್ಲೂರು ಅಜಿತ್
ಇವರ ಪುತ್ರ **ಚಿ| ಅಂಕಿತ್** ಇವನ ಬ್ರಹ್ಮೋಪದೇಶಕ್ಕೆ ಆಗಮಿಸಿ,
ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವ,

ಶ್ರೀಮತಿ ಜಯಶ್ರೀ ಮತ್ತು ಶ್ರೀ ವೈ. ಭುವನೇಂದ್ರ ರಾವ್, ಎಲ್ಲೂರು
ಶ್ರೀಮತಿ ಅರ್ಚನ ಹಾಗೂ ಶ್ರೀ ಅಜಿತ್, ಎಲ್ಲೂರು

## ಜೆಇಇ–ಮೇನ್ಸ್ ಪರೀಕ್ಷೆಯ ಸಾಧಕಿ ಮೇಘಾ ರಾವ್



ಆಳುಗ್ಗೇಲು ರಮೇಶ್ ರಾವ್ ಮತ್ತು ಶ್ರೀಮತಿ ದೀಪಾ ರಾವ್ ದಂಪತಿಯ ಪುತ್ರಿ ಕುಮಾರಿ ಮೇಘಾ ರಾವ್ ಅವರು ದ್ವಿತೀಯ ಪಿಯುಸಿ ಜೆಇಇ–ಮೇನ್ಸ್ ಪರೀಕ್ಷೆಯಲ್ಲಿ 99.95% ಅಂಕಗಳಿಸಿ ಅಖಿಲ ಭಾರತದಲ್ಲಿ 886 ರ್‍ಯಾಂಕ್ ಪಡೆದಿದ್ದಾರೆ.



Welcome to Kanasu The Resort

Escape to Kanasu for an unforgettable nature retreat.
Enjoy rustic pine cottages, warm hospitality, and local culinary delights.
Reconnect with family amidst nature's beauty.

Key Features & Amenities

- 6 Cottages
- 1 Farm House
- AC Rooms
- Swimming Pool
- Free Wifi
- Free Parking
- Free Breakfast
- Goushala
- Dhaba Style Restaurant
- All Kinds of Events


List of Games and Activities:

- Carom, Chess
- Jenga, Dart
- Fussball
- Mini Golf
- Basketball
- Trampoline
- Cricket
- Mini Football
- Badminton

For More Information

+91 90191 26470 www.kanasuresort.com Kukkehalli, Udupi - 576124

SUMIRASA-Full Villa in Udupi for Stay



Relax with the whole family at this peaceful place to stay with all major attraction at a short distance. Enjoy the sea waves at Malpe beach within 5 km drive. Seak blessing at the famous Srikrishna Temple and Anantheshwara Temple which is just 2 k.m.Perfect place for hosting wedding guests with major wedding venues and convention halls near by.







For Booking Contact : +91 98220 28537
You can also visit
https://www.airbnb.co.in/rooms

With Best Compliments From :

BUILDING DREAMS, ENHANCING LIVES.



NAKSHATRA
GANDHINAGAR



SOLITAIRE
HATHILL,



HABITAT ONE 54
DEREBAIL



ANANTESSH
CAR STREET,

Land Trades®
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar